**ಮಾಹಿತಿ ಹಕ್ಕು ಅಧ್ಯಯನ ಕೇಂದ್ರ ಹಾಗೂ ಕರ್ನಾಟಕ ಮಾಹಿತಿ ಆಯೋಗದ ಸಹಯೋಗದಲ್ಲಿ ದಿ:23.09.2018**
**ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ**
**"ಕರ್ನಾಟಕ ಸಾರ್ವಜನಿಕ ದಾಖಲೆಗಳ ಅಧಿನಿಯಮದ ಅನುಷ್ಠಾನ ಒಂದು ಸವಾಲು ಎಂಬ ವಿಚಾರಗೋಷ್ಠಿ"**

**ವಿಚಾರಗೋಷ್ಠಿಯಲ್ಲಿ ಹಾಜರಿದ್ದವರು:–**

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎಸ್.ಎಲ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಶೈಲೇಶ್ ಗಾಂಧಿ, ಕೇಂದ್ರ ಮಾಹಿತಿ ಆಯುಕ್ತರು (ನಿವೃತ),
4. ಶ್ರೀ ವೆಂಕಟೇಶ ನಾಯಕ್, ಸಿ.ಹೆಚ್.ಆರ್.ಐ. ನವದೆಹಲಿ.
5. ಶ್ರೀ ಎಸ್.ಕೆ. ಕಾಂತಾ, ಮಾಜಿ ಕಾರ್ಮಿಕ ಸಚಿವರು, ಗುಲಬರ್ಗಾ.

ಮಾಹಿತಿ ಹಕ್ಕು ಅಧ್ಯಯನ ಟ್ರಸ್ಟಿಗಳಾದ ಸಂಚಾಲಕರಾದ ಶ್ರೀ ಬಿ.ಹೆಚ್. ವೀರೇಶ್, ರವರು ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ, ಮಾನ್ಯ ಮುಖ್ಯ ಮಾಹಿತಿ ಆಯುಕ್ತರು, ಮಾಜಿ ಕೇಂದ್ರ ಮಾಹಿತಿ ಆಯುಕ್ತರು ಮತ್ತು ಮುಖ್ಯ ಅತಿಥಿಗಳಿಗೆ ಮಾಹಿತಿ ಹಕ್ಕು ಅಧ್ಯಯನ ಕೇಂದ್ರ ಹಾಗೂ ಕರ್ನಾಟಕ ಮಾಹಿತಿ ಆಯೋಗ ಸಹಯೋಗದಲ್ಲಿ ದಿನಾಂಕ:–23/09/2018 ರಂದು ನಡೆದಿರುವಂತಹ "ಕರ್ನಾಟಕ ಸಾರ್ವಜನಿಕ ದಾಖಲೆಗಳ ಅಧಿನಿಯಮ ಅನುಷ್ಠಾನ–ಒಂದು ಸವಾಲು" ಎಂಬ ವಿಚಾರಗೋಷ್ಠಿಗೆ ಆಗಮಿಸಿದ ಎಲ್ಲರನ್ನೂ ಹೂತ್ಪೂರ್ವಕವಾಗಿ ಸ್ವಾಗತಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಕರ್ನಾಟಕ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರಾದಂತಹ ಸನ್ಮಾನ್ಯ ಶ್ರೀ ಎಲ್. ಕೃಷ್ಣಮೂರ್ತಿಯವರು. ಸಾಮಾಜಿಕ ಕಾರ್ಯಕರ್ತರಾಗಿ ಗುರುತಿಸಿಕೊಂಡು 30 ವರ್ಷಗಳ ಕಾಲ ಸಾಮಾಜಿಕ ಹೋರಾಟಗಾರರಾಗಿ, 3 ವರ್ಷಗಳ ಕಾಲ ಅಂಗವಿಕಲರ ಅಧಿನಿಯಮದ ಆಯುಕ್ತರಾಗಿ, ಹಾಗೂ ಪ್ರಸ್ತುತ ನಾಲ್ಕು ವರ್ಷಗಳಿಂದ ಮಾಹಿತಿ ಆಯೋಗದಲ್ಲಿ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಮಧ್ಯೆ ಮೂರನೇ ಬಾರಿಗೆ ಅವರು ಪ್ರಭಾರಿ ಮುಖ್ಯ ಮಾಹಿತಿ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿರುವುದು. ಅತಂತ್ಯ ಶ್ಲಾಘನೀಯ ಎಂದು ತಿಳಿಸಿ ಈ ವಿಚಾರ ಗೋಷ್ಠಿಗೆ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು.

ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದ ಮತ್ತೊಬ್ಬ ಅತಿಥಿಯಾದ ಸನ್ಮಾನ್ಯ ಶ್ರೀ ಶೈಲೇಶ್ ಗಾಂಧಿ, ನಿವೃತ್ತ ಕೇಂದ್ರ ಮಾಹಿತಿ ಆಯುಕ್ತರು, ಅವರನ್ನು ಎಲ್ಲರ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸಿ. ಸನ್ಮಾನ್ಯರು ಮೂಲತಃ ಸಿವಿಲ್ ಇಂಜಿನಿಯರಾಗಿ ಐ.ಐ.ಟಿ. ಬಾಂಬೆಯಲ್ಲಿ ಅವರ ವಿದ್ಯಾಭ್ಯಾಸ ಮುಗಿಸಿ,. 2000ನೇ ಇಸವಿಯಿಂದ ಈ ಮಾಹಿತಿ ಹಕ್ಕಿನ ಅನುಷ್ಟಾನದ ಹೋರಾಟದ ಮುಂಚೂಣಿಯಲ್ಲಿದ್ದಂಥವರು ಮಾಹಿತಿ ಹಕ್ಕು ಕಾಯ್ದೆಯ ಕರಡನ್ನು ಸಿದ್ದಪಡಿಸಲು ನೇರವಾದಂಥವರು, ಮುಂಬಯಿನಲ್ಲಿ ಹಲವಾರು ಸಾಮಾಜಿಕ ಹೋರಾಟಗಳಲ್ಲಿ ಪಾಲ್ಗೊಂಡಿರುವ ಇವರ ಸೇವೆಯನ್ನು ಗುರುತಿಸಿ ಕೇಂದ್ರ ಮಾಹಿತಿ ಆಯೋಗಕ್ಕೆ ಪ್ರಪ್ರಥಮವಾಗಿ ಕೇಂದ್ರ ಮಾಹಿತಿ ಆಯುಕ್ತರನ್ನಾಗಿ ಸರ್ಕಾರ ನೇಮಕ ಮಾಡಿತು. 3 ವರ್ಷಗಳ ಕಾಲ ಮಾಹಿತಿ ಆಯುಕ್ತರಾಗಿ ಕಾರ್ಯನಿರ್ವಹಿಸಿದ ಇವರ ಅವಧಿಯಲ್ಲಿ ಸುಮಾರು

20,000 ಕ್ಕೂ ಹೆಚ್ಚು ಪ್ರಕರಣವನ್ನು ವಿಲೇವಾರಿ ಮಾಡಿರುತ್ತಾರೆ. ಇವರು ಮಾಡಿರತಕ್ಕಂತಹ ಅತ್ಯಂತ ಉತ್ತಮವಾದ ಆದೇಶದಿಂದ ಬ್ಯಾಂಕಿಂಗ್ ಇಂಡಸ್ಟ್ರಿಯಲ್ಲಿರತಕ್ಕಂತಹ ಆಡಿಟ್ ರಿಪೋರ್ಟ್‌ಗಳು ಸಾರ್ವಜನಿಕರಿಗೆ ಲಭ್ಯವಾಗುತ್ತಿದೆ. ಇದರ ಹಿಂದೆ ಇರತಕ್ಕಂತಹ ಶಕ್ತಿ ಸನ್ಮಾನ್ಯ ಶ್ರೀ ಶೈಲಶ್ ಗಾಂಧಿಯವರಿಗೆ ಸಲ್ಲುತ್ತದೆ ಎಂದು ತಿಳಿಸಿ ಈ ವಿಚಾರಗೋಷ್ಠಿಗೆ ಹೃತ್ಪೂರ್ವಕವಾಗಿ ಸ್ವಾಗತ ಕೋರಿದರು.

ವಿಚಾರ ಗೋಷ್ಠಿಗೆ ಆಗಮಿಸಿದ ಮತ್ತೊರ್ವ ಅತಿಥಿಯಾದ ರಾಜ್ಯ ಮಾಹಿತಿ ಆಯುಕ್ತರಾದಂತಹ ಶ್ರೀ ಎಸ್.ಎಲ್ ಪಾಟೀಲ್ ರನ್ನು ಆಹ್ವಾನಿಸುತ್ತಾ, ಸನ್ಮಾನ್ಯರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಅಪರ ಆಯುಕ್ತರಾಗಿ ಸೇವೆ ಸಲ್ಲಿಸಿ, ಕರ್ನಾಟಕ ಮಾಹಿತಿ ಆಯೋಗದ ಆಯುಕ್ತರಾಗಿ ಉತ್ತಮವಾದ ಆದೇಶಗಳನ್ನು ಮಾಡುವುದರ ಮೂಲಕ ಆಯೋಗಕ್ಕೆ ಶಕ್ತಿಯನ್ನು ತುಂಬುವಂತಹ ಕಾರ್ಯವನ್ನು ನಿರ್ವಹಿಸುತ್ತಿರುವ ಇವರಿಗೂ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

ನವದೆಹಲಿಯ ಸಿ.ಹೆಚ್.ಆರ್.ಐ ಸಂಸ್ಥೆ ಮಾನವ ಹಕ್ಕು ಮತ್ತು ಮಾಹಿತಿ ಹಕ್ಕಿನ ಬಗ್ಗೆ ಅಪಾರ ಕೆಲಸವನ್ನು ಮಾಡಿರತಕ್ಕಂತಹ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವೆಂಕಟೇಶ ನಾಯಕ್ ರವರು ಕಳೆದ ಹತ್ತು ವರ್ಷದಿಂದ ಮಾಹಿತಿ ಹಕ್ಕು ಅಧಿನಿಯಮ ಕುರಿತು ಅನೇಕ ಸಂಶೋಧನೆಗಳನ್ನು ಮಾಡಿದ್ದಾರೆ, ಇದಲ್ಲದೆ ಕೇಂದ್ರ ಸರ್ಕಾರದ ಹಲವಾರು ಆಡಳಿತಾತ್ಮಕ ವಿಷಯಗಳ ವಿಚಾರದಲ್ಲಿ ಅರ್ಜಿ ಸಲ್ಲಿಸಿ ಮಾಹಿತಿ ದೊರಕಿಸಿಕೊಡುವಲ್ಲಿ ಸಹಕರಿಸಿದ್ದಾರೆ, ಇದಲ್ಲದೆ ಸರ್ವೋಚ್ಛ ನ್ಯಾಯಾಲಯ ಮತ್ತು ಉಚ್ಛನ್ಯಾಯಾಲಯದ ಎಲ್ಲಾ ಆದೇಶಗಳನ್ನು ಒಗ್ಗೂಡಿಸಿ ಅದರ ವಿಶ್ಲೇಷಣೆಯನ್ನು ಮಾಡಿ ಜನರಿಗೆ ಈ ಕಾನೂನಿನ ತಿಳುವಳಿಕೆ ಮೂಡಿಸುವಂತಹ ಕೆಲಸವನ್ನು ಕಳೆದ 18 ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬಂದಿರುವ. ಅವರಿಗೂ ಸಮಾರಂಭಕ್ಕೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಕರ್ನಾಟಕದ ಮಾಜಿ ಮಂತ್ರಿಗಳು, ಹಿರಿಯ ಮಾರ್ಗದರ್ಶಿಗಳಾದಂತಹ ಸನ್ಮಾನ್ಯ ಶ್ರೀ ಎಸ್.ಕೆ. ಕಾಂತಾ ರವರಿಗೆ ವಿಚಾರಗೋಷ್ಠಿಗೆ ಹೃತ್ಪೂರ್ವಕವಾಗಿ ಸ್ವಾಗತ್ತಿಸುತ್ತಾ, ಶ್ರೀ ಎಸ್. ಕೆ ಕಾಂತರವರು ಅತ್ಯಂತ ಸರಳ ಜೀವಿ. ಕ್ಯಾಬಿನೆಟ್ ದರ್ಜೆ ಸಚಿವರಾಗಿ ನಿವೃತ್ತಿ ಹೊಂದಿದ್ದರೂ, ಇಂದಿಗೂ ಸಹ ಗುಲ್ಬರ್ಗಾದಲ್ಲಿ ಅನೇಕ ಸಾಮಾಜಿಕ ಸಮಸ್ಯೆಗಳ ಬಗ್ಗೆ ಹೋರಾಟ ಮಾಡುವಂತ ವ್ಯಕ್ತಿತ್ವವನ್ನು ಹೊಂದಿರುತಾರೆ. ಕಾರ್ಮಿಕ ಸಮಸ್ಯೆಗಳ ಬಗ್ಗೆ ಬಹಳ ಕಾಳಜಿ ಉಳ್ಳವರು ನಮ್ಮೆಲ್ಲರಿಗೂ ಕಳೆದ 12 ವರ್ಷಗಳಿಂದ ನಮಗೆ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಎಂದು ತಿಳಿಸುತ್ತ ಅವರನ್ನು ವಿಚಾರಗೋಷ್ಠಿಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಕರ್ನಾಟಕ ರಾಜ್ಯದಲ್ಲಿ ಮಾಹಿತಿ ಹಕ್ಕು ಅಧ್ಯಯನ ಕೇಂದ್ರವು ಮತ್ತು ಮಾಹಿತಿ ಹಕ್ಕಿಗೆ ಸಂಬಂಧಪಟ್ಟಂತೆ ಒಂದು ದಶಕದಿಂದ ಹೋರಾಟ ಮಾಡುತ್ತಾ ಬಂದಿದೆ, ಜನರಲ್ಲಿ ಆರ್.ಟಿ.ಐ ಅರಿವು ಮೂಡಿಸುವಂತಹ ಕೆಲಸ ಮಾಡುತ್ತ ಮಾಹಿತಿ ಹಕ್ಕಿನ ಉಳಿವು ಮತ್ತು ಬೆಳವಣಿಗೆಗೆ ಅತ್ಯಂತ ಸಹಕಾರವನ್ನು ನೀಡುತ್ತಿದೆ. ರಾಜ್ಯದ ಹಲವು ಭಾಗಗಳಿಂದ ಬಂದು ಈ ಸಮಾರಂಭಕ್ಕೆ ಹಾಜರಾಗಿರುವ ಎಲ್ಲರಿಗೂ. ಈ ವಿಚಾರಗೋಷ್ಠಿಗೆ ಹೃತ್ಪೂರ್ವಕವಾಗಿ ಸ್ವಾಗತವನ್ನು ಬಯಸಿದರು.

ಸಮಾರಂಭದ ಮೂಲ ಉದ್ದೇಶ ಕರ್ನಾಟಕ ಮಾಹಿತಿ ಆಯೋಗದಲ್ಲಿ ಹಲವಾರು ಪ್ರಕರಣಗಳಲ್ಲಿ ಅರ್ಜಿ ಸಲ್ಲಿಸಿದಾಗ ಮಾಹಿತಿ ಲಭ್ಯವಿಲ್ಲ, ಕಡತ ಕಳೆದು ಹೋಗಿದೆ, ಕಡತ ಸುಟ್ಟು ಹೋಗಿದೆ ಈ ರೀತಿ ಹಲವಾರು ಕಾರಣಗಳನ್ನು ನೀಡಿ ಮಾಹಿತಿ ನೀಡುವುದನ್ನು ನಿರಾಕರಿಸುವಂತಹ ಸಂದರ್ಭಗಳು ಬಂದಿವೆ. ಇಂತಹ ಹಲವಾರು ಸಂದರ್ಭಗಳು ಕಂಡಾಗ ಹಿಂದಿನ ಮಾಹಿತಿ ಆಯುಕ್ತರಾದಂತಹ ಶ್ರೀ ತಿಪ್ಪೆಸ್ವಾಮಿ ಮತ್ತು ಶ್ರೀ ಕೆ.ಕೆ.ಮಿಶ್ರಾ, ರವರು ಕೇಂದ್ರ ಸರ್ಕಾರದಲ್ಲಿ ಇರತಕ್ಕಂತಹ ಪಬ್ಲಿಕ್ ರೆಕಾರ್ಡ್ ಆಕ್ಟ್ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಏಕೆ ಒಂದು ಕಾನೂನು ತರಬಾರದೆಂಬ ಚಿಂತನೆಯನ್ನು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು, ಆದರೆ ಸರ್ಕಾರದಲ್ಲಿ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಕೊನೆಗೆ 2010 ರಲ್ಲಿ ಕಾನೂನನ್ನು ರಚಿಸಲಾಯಿತು. ಪಬ್ಲಿಕ್ ರೆಕಾರ್ಡ್ ಆಕ್ಟ್ 2010 ರಲ್ಲಿ ಜಾರಿಯಾದರು ಸಹ ನಿಯಮಗಳನ್ನು ರೂಪಿಸಲು ಬಹಳಷ್ಟು ತಡ ಮಾಡಿದಲ್ಲದೆ, ಬಹಳಷ್ಟು ಜನರು ಇದರ ಅನುಷ್ಟಾನಕ್ಕೆ ವಿರೋಧಿಸಿದರು. ಕೊನೆಗೆ 2013 ರಲ್ಲಿ ನಿಯಮ ಜಾರಿಗೆ ಬಂದಿತ್ತು. 2013 ರಲ್ಲಿ ಜಾರಿಗೆ ಬಂದರು ಕೂಡಾ Notification ಗೂ ವಿಳಂಬ ಮಾಡಿದ್ದರು, ಮತ್ತೆ ಸರ್ಕಾರ ಪುಸ್ತಕ ಮುದ್ರಿಸುವಂತಹ ಕೆಲಸ ಮಾಡಲಿಲ್ಲ. ಕೊನೆಗೆ ನಮ್ಮ ಸಂಸ್ಥೆಯಿಂದ ಕರ್ನಾಟಕ ಪಬ್ಲಿಕ್ ಆಕ್ಟ್ ಮತ್ತು ರೂಲ್ಸ್ ಪುಸ್ತಕವನ್ನು ಪ್ರಕಟಿಸಿದ್ದೇವೆ. ಇದರ ಜೊತೆ ಕರ್ನಾಟಕ ಮಾಹಿತಿ ಆಯೋಗದಲ್ಲಿ ಸನ್ಮಾನ್ಯ ಶ್ರೀ ಎಲ್. ಕೃಷ್ಣಮೂರ್ತಿ ರವರು ಆದೇಶ ಮಾಡಿ. ಮಾಹಿತಿ ಕಳೆದು ಹೋದರೆ ಎಪ್.ಐ.ಆರ್ ಮಾಡಬಹುದು ಎಂದು ಹೇಳಿ ದೇವನಹಳ್ಳಿಯ ಒಂದು ಪ್ರಕರಣದಲ್ಲಿ ಮಾಹಿತಿ ಕಳೆದು ಹೋಗಿದ್ದ ಪ್ರಕರಣದಲ್ಲಿ ಇಲಾಖಾ ತನಿಖೆಗೆ ಆದೇಶ ಮಾಡಿದರು. ಇಲಾಖಾ ತನಿಖೆಯಲ್ಲಿ ಯಾರು ಇದಕ್ಕೆ ತಪ್ಪಿತಸ್ಥರು, ಅವರ ಮೇಲೆ ಎಫ್.ಐ.ಆರ್ ಕೂಡಾ ಹಾಕಬಹುದೆಂಬ ಆದೇಶಮಾಡಿದ್ದಾರೆ, ಇಲ್ಲಿಯವರೆಗೆ ಸುಮಾರು 20 ಪ್ರಕರಣದಲ್ಲಿ ಕಡತ ಕಳೆದುಕೊಂಡಂತಹ ಸಂದರ್ಭದಲ್ಲಿ ಎಫ್.ಐ.ಆರ್ ಹಾಕಿರುವುದು ಕರ್ನಾಟಕ ರಾಜ್ಯದಲ್ಲಿ ಮಾತ್ರ. ಬೇರೆ ಯಾವ ರಾಜ್ಯದಲ್ಲಿಯೂ ಸಹ ಆಗಲಿಲ್ಲ. ಕೇಂದ್ರ ಮಾಹಿತಿ ಆಯೋಗದ ಆದೇಶ ಇದಕ್ಕೆ ಸಂಬಂಧಪಟ್ಟಂತಹ ರಾಜ್ಯ ಸರ್ಕಾರ ಹೊರಡಿಸಿದಂತಹ ಸುತ್ತೋಲೆಯನ್ನು ಸಂಗ್ರಹಿಸಿ ಅದನ್ನು ಪುಸ್ತಕರೂಪದಲ್ಲಿ ಹೊರತಂದಿರುವುದಾಗಿ ಶ್ರೀ ವೀರೇಶ್. ಟ್ರಸ್ಟಿ, ಮಾಹಿತಿ ಹಕ್ಕು ಅಧ್ಯನಯನ ಕೇಂದ್ರ, ಬೆಂಗಳೂರು. ರವರು ತಿಳಿಸಿದರು.

ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ವತಿಯಿಂದ "ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ಕಾಯಿದೆ 2010 ಮತ್ತು ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ನಿಯಮಗಳು 2013" ಪುಸ್ತಕವನ್ನು ಶ್ರೀ ಎಲ್. ಕೃಷ್ಣಮೂರ್ತಿ ಹಾಗೂ ಶ್ರೀ ಶೈಲೇಶ್‌ಗಾಂಧಿ ರವರು ಜಂಟಿಯಾಗಿ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರು. ನಮ್ಮ ಎಲ್ಲಾ ಅತಿಥಿಗಳು ಸೇರಿ ಈ ಪುಸ್ತಕ ಬಿಡುಗಡೆ ಮಾಡಬೇಕೆಂದು ಕೋರಿದರು. ಪುಸ್ತಕವನ್ನು ಮಾರಟಕ್ಕೂ ಇಟ್ಟಿದ್ದೇವೆಂದು ತಿಳಿಸಿ ಕಾನೂನಿನ ಅನುಷ್ಟಾನಕ್ಕೆ ನೆರವನ್ನು ನೀಡಬೇಕೆಂದು ವಿನಂತಿಸಿದರು.

ಕೇಂದ್ರ ಮಾಹಿತಿ ಆಯೋಗದ ನಿವೃತ್ತ ಮಾಹಿತಿ ಆಯುಕ್ತರಾದ ಶ್ರೀ ಶೈಲೇಶ್ ಗಾಂಧಿಯವರು ವಿಚಾರಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಸರ್ಕಾರದ ದಾಖಲೆಗಳ ಕಂಪ್ಯೂಟರೀಕರಣದಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬಹುದು ಎಂದು ಅಭಿಪ್ರಾಯಪಟ್ಟರು. 'ದಾಖಲೆ ಕಳುವಾಗಿದೆ. ಕಡತಗಳು ನಾಶವಾಗಿದೆಯೆಂದು ಅಧಿಕಾರಿಗಳು ಹೇಳುವುದು ತಪ್ಪಿಸಬೇಕಾದರೆ ಕಾಗದ ಮುಕ್ತ ವ್ಯವಸ್ಥೆ ಜಾರಿಯಾಗಬೇಕು ಕಂಪ್ಯೂಟರ್ ಬಳಕೆಯಿಂದ ಹಲವು ಕಡತಗಳನ್ನು ತೆರೆಯದಂತೆ

ಗೌಪ್ಯತೆ ಸಂಖ್ಯೆ (ಪಾಸ್‌ವರ್ಡ್) ವ್ಯವಸ್ಥೆಯನ್ನೂ ಅಳವಡಿಸಲು ಸಾಧ್ಯವಿದ್ದು, ಇದರಿಂದ ಅನಗತ್ಯವಾಗಿ ಮಾಹಿತಿ ಸೋರಿಕೆಯಾಗುವುದು ತಪ್ಪಿಸಬಹುದು' ಎಂದು ಅವರು ವಿವರಿಸಿದರು.

ಮುಂದುವರೆದಂತೆ ಮಾಹಿತಿಗಳನ್ನು ದಾಖಲೆರೂಪದಲ್ಲಿ ನೀಡುವುದರಿಂದ ಪ್ರಕರಣಗಳ ವಿಲೇವಾರಿ ವಿಳಂಬವಾಗುತ್ತಿದೆ. ಆನ್‌ಲೈನ್ ಮೂಲಕ ಮಾಹಿತಿ ನೀಡಿದರೆ ಶೀಘ್ರಗತಿಯಲ್ಲಿ ಮಾಹಿತಿ ಒದಗಿಸಲು ಸಾಧ್ಯವಾಗಬಹುದು. ಪ್ರಜಾಪ್ರಭುತ್ವದಲ್ಲಿ ಮಾಹಿತಿ ಕೇಳಿ ಪಡೆಯುವುದು ಮೂಲಭೂತ ಹಕ್ಕಾಗಿದ್ದು, ಮಾಹಿತಿಗಳನ್ನು ಮುಚ್ಚಿಡುವಂತಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ಸಹ, ಕಡತ ಕಳೆದು ಹೋಗುವ ಪ್ರಕರಣಗಳು ಹೆಚ್ಚುತ್ತಿರುವ ವಿಚಾರದಲ್ಲಿ ಆತಂಕ ವ್ಯಕ್ತಪಡಿಸಿದರು. ನಂತರ ಶ್ರೀ ಬಿ.ಹೆಚ್. ವೀರೇಶ್ ರವರು ಶ್ರೀ ಶೈಲೇಶ್ ಗಾಂಧಿಯವರಿಗೆ ಧನ್ಯವಾದವನ್ನರ್ಪಿಸಿದರು.

ರಾಜ್ಯ ಮಾಹಿತಿ ಆಯುಕ್ತರಾದಂತಹ ಶ್ರೀ ಎಸ್.ಎಲ್.ಪಾಟೀಲ್ ರವರು ವಿಚಾರಗೋಷ್ಠಿಯಲ್ಲಿ ಹಾಜರಾಗಿದ್ದ ಎಲ್ಲಾ ಗಣ್ಯರನ್ನು ಅಭಿನಂದಿಸುತ್ತಾ ತಾವು ಗಮನಿಸಿದ ಹಾಗೆ ಕೆಲವು ಪ್ರಕರಣಗಳಲ್ಲಿ ಪ್ರತಿವಾದಿಗಳು "ಮಾಹಿತಿ ಲಭ್ಯವಿಲ್ಲವೆಂದು" ತಿಳಿಸಿ ಹಿಂಬರಹವನ್ನು ಒದಗಿಸುತ್ತಾರೆ. ಆದರೆ ಮಾಹಿತಿ ಯಾವ ಕಾರಣಕ್ಕೆ ಲಭ್ಯವಿಲ್ಲವೆಂಬುವುದನ್ನು ತಿಳಿಸುವುದಿಲ್ಲ. ಕೆಲವು ಪ್ರಕರಣದಲ್ಲಿ, "ಕಡತ ಲಭ್ಯವಿಲ್ಲ"ವೆಂದು ತಿಳಿಸಿರುತ್ತಾರೆ ಆದರೆ, ಪಬ್ಲಿಕ್ ರೆಕಾಡ್ ಆಕ್ಟ್ ಪ್ರಕಾರ ಲಭ್ಯವಿಲ್ಲವೆಂಬ ಕಾರಣ ನೀಡಲು ಸಾಧ್ಯವಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಕಡತ ನಿರ್ವಹಿಸುತ್ತಿದ್ದಂತಹ ಅಧಿಕಾರಿಗಳ ವಿರುದ್ಧ ಎಫ್.ಐ.ಆರ್. ಮಾಡಿ ಸೂಕ್ತ ಕ್ರಮಜರುಗಿಸಬಹುದೆಂದು ತಿಳಿಸಿದರು.

ಮುಂದುವರೆಸಿ ಶ್ರೀ ಶೈಲೇಶ್ ಗಾಂಧಿ ರವರು ತಿಳಿಸಿದ ಹಾಗೆ ಕಡತ ನಿರ್ವಹಣೆ ಗಣಕೀಕೃತವಾದಲ್ಲಿ ಕಡತ ಕಾಣೆಯಾಗುವ ಪ್ರಮೇಯವಿರುವುದಿಲ್ಲ ಹಾಗೂ ಗಣಕೀಕೃತ ಕಡತವನ್ನು ನಕಲಿ ಮತ್ತು ಬದಲಾವಣೆ ಮಾಡಲಾಗದಂತೆ ಭದ್ರತೆಯನ್ನು ಮಾಡಿದರೆ ಯಾವುದೇ ದುರುಪಯೋಗವಾಗುವುದಿಲ್ಲವೆಂದು ತಿಳಿಸಿರುತ್ತಾರೆ.

ಸಿ.ಹೆಚ್.ಆರ್.ಐ ಸಂಸ್ಥೆ ಸದಸ್ಯರಾದ ಶ್ರೀ ವೆಂಕಟೇಶ್ ನಾಯಕರವರು ವಿಚಾರಗೋಷ್ಠಿಯಲ್ಲಿ ಹಾಜರಾಗಿದ್ದ ಎಲ್ಲಾ ಗಣ್ಯರನ್ನು ಅಭಿನಂದಿಸುತ್ತಾ ಕೇಂದ್ರ ಸರ್ಕಾರದಲ್ಲಿರುವ ನಿಯಮದಂತೆ ರಾಜ್ಯ ಸರ್ಕಾರದಲ್ಲಿಯೂ (Transaction Rule).ಎಂಬ ನಿಯಮವಿದ್ದು, ನಿಯಮವೆಂದರೆ ಸರ್ಕಾರ ಯಾವ ವಿಭಾಗವು ಸರ್ಕಾರದ ಕೆಲಸವನ್ನು ಮಾಡುವುದಲ್ಲದೆ, ಕಾನೂನನ್ನು ಅನುಷ್ಠಾನ ಮಾಡುವುದಕ್ಕೆ ಅವರಿಗೆ ಜವಾಬ್ದಾರಿ ಕೊಟ್ಟಿದೆ. ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಕೆಲಸವನ್ನು ಶಿಕ್ಷಣ ಇಲಾಖೆಗೆ ಮಾಡುವುದಕ್ಕಾಗುವುದಿಲ್ಲವೋ. ಹಾಗೆಯೇ ಯಾವ ಇಲಾಖೆ ಕೆಲಸ ಮಾಡಬೇಕು ಎಂಬ ವಿಷಯವಾರು, ಕಾನೂನುವಾರು ಪಟ್ಟಿ ಮಾಡುವುದು ಮತ್ತು ಇಲಾಖೆಯೊಳಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ಇಲಾಖೆಗೆ ಸಂಬಂಧಪಟ್ಟಿದ್ದರೆ ಕಡತಗಳ ಚಲನ-ವಲನ (Movement) ಹೇಗೆ ಮಾಡಬೇಕು, ಯಾವ ಪ್ರಕರಣಗಳನ್ನು ಕೌನ್ಸಿಲ್‌ಗೆ ತೆಗೆದುಕೊಂಡು ಹೋಗಬೇಕು, ಯಾವ ಪ್ರಕರಣವನ್ನು ಇಲಾಖೆಗೆ ಸಂಬಂಧಪಟ್ಟಂಥ ಮಂತ್ರಿಯವರ ಅನುಮತಿ ಪಡೆದುಕೊಂಡು ಕೆಲಸ ಮಾಡಬಹುದು ಇವೆಲ್ಲವನ್ನು Business & Transaction Rules ನಲ್ಲಿ ಇರುವುದನ್ನು ತಿಳಿಸಿದರು ಇದೇ ರೀತಿ ರಾಜ್ಯ ಮತ್ತು ಕೇಂದ್ರ ಸರ್ಕಾರದಲ್ಲೂ ಇರುತ್ತದೆಂದು ವಿವರಿಸಿದ್ದರು,

2015ನೇ ಇಸವಿಯವರೆಗೆ Business & Transaction Rules ಅನ್ನುವುದು ಸಾರ್ವಜನಿಕ ಕ್ಷೇತ್ರದಲ್ಲಿ ಹಂಚಿಕೆ ವ್ಯವಹಾರ ನಿಯಮದಂತೆ ನಾನು ಆ ಪ್ರಕರಣವನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರದಲ್ಲಿ ವಾದ ಮಾಡಿ Business & Transaction Rules ನಂತಹ. ಮೂಲ ನಿಯಮ ಸರ್ಕಾರದ ಇಲಾಖೆಯಲ್ಲಿ ಕೆಲಸ ಮಾಡುವ ರೀತಿ ಹೇಗೆ ಎನ್ನುವುದನ್ನು ಹೇಳಿಕೊಡುವಂತಹ ನಿಯಮವಾಗಿದೆ. ಅದನ್ನು ಸಾರ್ವಜನಿಕರಿಂದ ಮುಚ್ಚಿಡಲು ಸಾಧ್ಯವೇ ಇಲ್ಲ, ಕಾನೂನುಗಳು ಮತ್ತು ನಿಯಮಗಳು ಯಾವತ್ತು ಗೌಪ್ಯನೀಯವಾಗಿ ಇಡಬಾರದು. ಏಕೆಂದರೆ ನಮ್ಮ ದೇಶದ ನ್ಯಾಯಾಲಯ ವ್ಯವಸ್ಥೆಯ ಒಂದು ಸಿದ್ಧಾಂತ ಅಂದರೆ ನಮಗೆ ಕಾನೂನು ಗೊತ್ತಿಲ್ಲ ಎನ್ನುವುದು ಕಾನೂನು ಉಲ್ಲಂಘನೆಗೆ ನಾವು ಕೊಡುವ ಕಾರಣ ಆಗುವುದಕ್ಕೆ ಸಾಧ್ಯವಿಲ್ಲ, ಮುಂದುವರೆದು Business & Transaction Rules ಯಾರು ಬೇಕಾದರೂ ಸಹ ನೋಡಬಹುದು. ಅದರ ನಿಯಮ 5ರ ಪ್ರಕಾರ ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯ ಒಂದು ಅಧಿಕಾರ ಕೊಟ್ಟಿದೆ. ಹಣಕಾಸಿಗೆ ಸಂಬಂಧಪಟ್ಟಂತಹ ಯಾವುದೇ ಒಂದು ಕಡತವನ್ನು ಕೇಂದ್ರ ಸರ್ಕಾರದ ಯಾವುದೇ ವಿಭಾಗದಿಂದ ಅದನ್ನು ತರಿಸಿ ಪರಿಶೀಲಿಸಬಹುದು. ಹೇಗೆ ಪ್ರಧಾನ ಮಂತ್ರಿಗಳಿಗೆ ಕೇಂದ್ರ ಸರ್ಕಾರದ ಕೆಲಸ ಕಾರ್ಯಗಳಿಗೆ ಸಂಬಂಧಪಟ್ಟಂತಹ ಯಾವುದೇ ಕಡತವನ್ನು ಯಾವುದೇ ವಿಭಾಗದಿಂದ ತರಿಸಿ ಪರಿಶೀಲಿಸುವಂತಹ ಅಧಿಕಾರ ಇರುತ್ತದೆಯೋ ಹಾಗೆ ವ್ಯವಹಾರ ಹಂಚಿಕೆ ನಿಯಮ. ಹಣಕಾಸಿಗೆ ಸಂಬಂಧಪಟ್ಟಂತೆ ವಿತ್ತ ಮಂತ್ರಾಲಯಕ್ಕೂ ಒಂದು ಅಧಿಕಾರವನ್ನು ನೀಡಿದೆ. ಹಾಗಾಗಿ ನಾನು ಮಾರ್ಚ್‌ನಲ್ಲಿ ಕಳೆದ 06 ತಿಂಗಳಲ್ಲಿ ನಮ್ಮ ಮಾನ್ಯ ಹಣಕಾಸು ಮಂತ್ರಾಲಯ ಯಾವ ಯಾವ ಕಡತಗಳು ಯಾವ ಯಾವ ವಿಭಾಗದಿಂದ ನಿಯಮ 5 ರಲ್ಲಿ ಕಡತಗಳನ್ನು ತರಿಸಿದ್ದಾರೆ ದಯವಿಟ್ಟು ಅದರ ಮಾಹಿತಿ ಕೊಡಿ. ಎಂದು ಕೇಳಿದರೆ ಸಾರ್ವಜನಿಕ ಮಾಹಿತಿ ಅಧಿಕಾರಿ ಉತ್ತರಿಸಿರುವುದೇನೆಂದರೆ, **"ನೀವು ಕೇಳಿದ ಪ್ರಶ್ನೆಗಳ ಬಗ್ಗೆ ನಾವು ಮಾಹಿತಿಯನ್ನು ಕೋರಿ ಮಾನ್ಯ ಹಣಕಾಸು ಮಂತ್ರಾಲಯ ಕಛೇರಿಗೆ ಕೋರಿಕೆ ಕೊಟ್ಟಿದ್ದೇವು. ಆದರೆ ಅವರಿಂದ ಬಂದಿರುವ ಉತ್ತರ ನಮ್ಮ ಹತ್ತಿರ ಯಾವುದೇ ಮಾಹಿತಿಯು ಇಲ್ಲ".** ಎಂದು ಅಂದರೆ ಯಾವ ಮಂತ್ರಿಗೆ ಯಾವ ತರಹದ ಕೆಲಸ ಕೊಟ್ಟಿದ್ದಾರೆ ಅದರ ಬಗ್ಗೆ ಮಾಹಿತಿ ಇಲ್ಲ. ಯಾವ ವಿಭಾಗದಿಂದ ಏನೇನು ಕಡತಗಳು ಬಂದಿವೆ, ಕೇವಲ ಮಂತ್ರಿಗಳ ಮೂಲಕ ಏನೇನು ತರಿಸಿದ್ದಾರೆ ಅದು ಕೂಡಾ ಇಲ್ಲಾ. ಇಲ್ಲಿಯವರೆಗೆ ಏನು ಕೆಲಸ ಮಾಡಿದ್ದೀರಾ? ಕಾರಣ ಇಷ್ಟೇ, ನಾನು ಕೇಳಿದ ಎರಡು ಪ್ರಶ್ನೆಗಳಿಗೆ ಸಂಬಂಧಪಟ್ಟಂತ ಮಾಹಿತಿ ಏನಿದೆ, ಅದನ್ನು ಮಾಹಿತಿ ಹಕ್ಕು ಅಧಿನಿಯಮ 2005 ಸೆಕ್ಷನ್ 4 ರಲ್ಲಿ ಸ್ವತಃ ಪ್ರಕಟಣೆ ಮಾಡಬೇಕಾಗಿದೆ. ಮುಂದುವರಿಸಿ, ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ಅಧಿನಿಯಮ 2010 ಮತ್ತು ನಿಯಮ 2013 ಕೃತಿ ಬಿಡುಗಡೆ ಬಗ್ಗೆ ಸದರಿಯವರು ಮಾತನಾಡಿ, 2013 ನೇ ಇಸವಿಯಲ್ಲಿ ದೆಹಲಿಯ ಹೈಕೋರ್ಟ್ ನೀಡಿದ ಆದೇಶದಲ್ಲಿ ಒಂದು ವೇಳೆ ಕಡತ ಇಲ್ಲದೇ ಇರುವ ಪಕ್ಷದಲ್ಲಿ ಅದರ ತನಿಖೆ ಮಾಡುವುದಕ್ಕೆ ಮಾಹಿತಿ ಆಯೋಗಕ್ಕೆ ಸಂಪೂರ್ಣ ಅಧಿಕಾರ ಇದೆ ಎಂಬ ಆದೇಶವನ್ನು ದೆಹಲಿ ಹೈಕೋರ್ಟ್ ನೀಡಿದೆ ಆ ಒಂದು ಕಡತ ಕಾಣೆಯಾದ ವಿಷಯ ತಿಳಿದುಬಂದಲ್ಲಿ ಪೋಲಿಸ್‌ರವರ ಬಳಿ ಹೋಗಿ ಸೆಕ್ಷನ್ 154 ಸಿ.ಆರ್.ಪಿ ಮುಖೇನ ಎಫ್.ಐ.ಆರ್. ದಾಖಲು ಮಾಡುವಂತಹ ಅಧಿಕಾರವನ್ನು ದೆಹಲಿ ಹೈಕೋರ್ಟ್‌ನವರು ಮಾಹಿತಿ ಆಯೋಗಕ್ಕೆ ನೀಡಿ ನಿರ್ಣಯ ಮಾಡಿದರು. ಒಂದು ವೇಳೆ ಎಫ್.ಐ.ಆರ್. ದಾಖಲು ಮಾಡಿಲು ಆಗದ್ದಿದರೆ ವೈಯಕ್ತಿಕವಾಗಿ ಸೆಕ್ಷನ್ 20 ಸಿ.ಪಿ.ಸಿ ಪ್ರಕಾರ ನಾಗರೀಕರೆ

ಎಫ್.ಐ.ಆರ್ ದಾಖಲಿಸ ಬಹುದೆಂದು ದೆಹಲಿ ನ್ಯಾಯಾಲಯವು ತಿಳಿಸಿರುವ ವಿಷಯವನ್ನು ಸನ್ಮಾನ್ಯರು ಈ ವಿಚಾರ ಗೋಷ್ಠೀಯಲ್ಲಿ ತಿಳಿಸಿದರು.

ದೆಹಲಿ ಉಚ್ಚನ್ಯಾಯಾಲಯವು ತನ್ನ ಆದೇಶದಲ್ಲಿ. ಆ ಒಂದು ದಾಖಲೆ ಇದೆಯೋ ಅಥವಾ ಇಲ್ಲವೋ ಎಂಬ ಮಾಹಿತಿಯನ್ನು ಖಾತ್ರಿಯಾಗಿ ಹೇಳಬೇಕಾದಂತಹ ಜವಬ್ದಾರಿ ತಿಳಿದುಕೊಳ್ಳಲುವ ಅಧಿಕಾರ ನಾಗರೀಕರಿಗೆ ಇದೆ. ಎಂದು ಹೇಳಿದರು. ನಾಗರೀಕರಿಗೆ ನಾರ್ವೆ ದೇಶದಲ್ಲಿ 24 ಗಂಟೆಗಳಲ್ಲಿ ಮಾಹಿತಿ ಒದಗಿಸಲಾಗುತ್ತಿದೆ. ಈ ಮಾದರಿಯನ್ನು ಭಾರತದಲ್ಲಿ ಅಳವಡಿಸಿಕೊಂಡರೆ ತುರ್ತಾಗಿ ಸಾರ್ವಜನಿಕರಿಗೆ ಮಾಹಿತಿ ಒದಗಿಸಬಹುದು ಇದಕ್ಕೆ ಸಾರ್ವಜನಿಕ ದಾಖಲೆಗಳ ಅಧಿನಿಯಮವು ಗೌಪ್ಯತೆಯನ್ನು ಮೀರಿ ಮಾಹಿತಿ ಹಕ್ಕು ಅಭಿವೃದ್ಧಿಯಾಗಿದೆ. ಕಲಂ 8(1)ರಲ್ಲಿ ಯಾವ ಮಾಹಿತಿ ನೀಡಬೇಕು ಮತ್ತು ನೀಡಬಾರದು ಎಂದು ನಿಗದಿತವಾಗಿ ತಿಳಿಸದರೆ ಸಾರ್ವಜನಿಕರಿಗೆ ಸಹಾಯವಾಗಲಿದೆ ಎಂದು ಹೇಳಿದರು.

ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ವಿಚಾರಗೋಷ್ಠಿಯನ್ನುದ್ದೇಶಿಸಿ ಮಾತನಾಡಿ ಕರ್ನಾಟಕದ ಮಾಹಿತಿ ಆಯೋಗದ ಸಹಯೋಗದಲ್ಲಿ ನಡೆದ "ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ಅಧಿನಿಯಮದ" ವಿಚಾರಗೋಷ್ಠಿಯ ಅತಿಥಿಗಳಾದ ಶ್ರೀ ಶೈಲೇಶ್ ಗಾಂಧಿಯವರಿಗೆ ಪ್ರಪ್ರಥಮವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಯಾಕೆಂದರೆ ಇವರು ಒಂದು ರೀತಿಯ ಮಾಹಿತಿ ಹಕ್ಕು ಅಧಿನಿಯಮದ ಜಾರಿಗೆ ಕೇಂದ್ರಬಿಂದು. ಮಾಹಿತಿ ಕಾಯ್ದೆಯ ಪಿತಾಮಹ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು.

ಹಿಂದಿನ ಮಾಹಿತಿ ಆಯೋಗದ ನಿವೃತ್ತ ಆಯುಕ್ತರಾದ ಶ್ರೀ ಎ.ಕೆ.ಎಂ ನಾಯಕ್ ರವರು ಹೇಳಿದಂತೆ ನಮ್ಮ ಮಾಹಿತಿ ಆಯೋಗವು 5ನೇ ಸ್ಥಾನದಲ್ಲದೆಯೆಂದು ತಿಳಿಸಿರುವುದು ಬಹಳ ಸಂತೋಷಕರವಾದ ವಿಷಯ. ಆದರೆ ಇದಕ್ಕೆ ಅಧಿಕಾರಿಗಳ ವರ್ಗವು ಯಾವ ಪ್ರಮಾಣದಲ್ಲಿ ಮಾಹಿತಿಯನ್ನು ಕೊಡಿಸುತ್ತಾ ಬಂದಿದೆ, ಎಂಬುದು ಬಹಳ ಮುಖ್ಯವಾಗುತ್ತದೆ. ಇಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಿಂದ ಬಂದ ಒಬ್ಬ ವ್ಯಕ್ತಿಗೆ ಆತನಿಗೆ ಬೇಕಾಗುವತಂಹ ಮಾಹಿತಿಯು ಸರಿಯಾದ ಸಮಯದಲ್ಲಿ ಸಿಗದಿರುವ ಕೆಲಸವಾಗುತ್ತಿರುವುದು ಕಂಡುಬಂದಿರುವುದು. ಬಹಳ ನೋವಿನ ಸಂಗತಿ. ಯಾವಾಗ ಒಬ್ಬ ಗ್ರಾಮೀಣ ವ್ಯಕ್ತಿಯು ತಾನು ಕೋರಿರುವ ಮಾಹಿತಿಗೆ ಆಯೋಗದಲ್ಲಿ ಮಾಹಿತಿ ಆತನಿಗೆ ಲಭಿಸುತ್ತದೆಯೋ ಆಗ ಮಾತ್ರ ಮಾಹಿತಿ ಆಯೋಗಕ್ಕೆ ಸಮಾಜದಲ್ಲಿ ಒಳ್ಳೆಯ ಹೆಸರು ಹಾಗೂ ನಂಬಿಕೆಯು ಮೂಡುಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಹಿರಿಯ ನಾಗರಿಕರಾದ ಶ್ರೀ ಹೆಚ್.ಟಿ. ಗಿರಿಯಪ್ಪನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಎಂದು ಸನ್ಮಾನ್ಯರು ತಿಳಿಸಿದರು.

ಮುಂದುವರೆದಂತೆ ನಾನು ಸುಮಾರು 20 ರಿಂದ 30 ಪ್ರಕರಣಗಳಲ್ಲಿ ಶಿಸ್ತು ಕ್ರಮದ ಆದೇಶಿಸಿ ಶಿಫಾರಸ್ಸು ಮಾಡಿದ್ದೇನೆ. ಇನ್ನು ಬಹಳಷ್ಟು ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು (ಎಫ್.ಐ.ಆರ್)ನ್ನು ಹಾಕುವಂತೆ ನಿರ್ದೇಶನವನ್ನು ಸಹ ನೀಡಿದ್ದೇನೆ ಎಂದು ಹೇಳಿ. ಡಾ॥ ಅಂಬೇಡ್ಕರ್‌ರವರನ್ನು ನೆನೆಯುತ್ತಾ ಸಂವಿಧಾನವನ್ನು ನೆನಪಿಸಿಕೊಂಡು ಅದರಲ್ಲಿ ಬರೆದಿರುವಂತಹ ಹಕ್ಕು ಕರ್ತವ್ಯ, ಸಾಮಾಜಿಕ ಭದ್ರತೆಗಳನ್ನು ಅರ್ಥೈಸಿಕೊಂಡು ಅದರ ರೂಪುರೇಷೆಗಳನ್ನು ಅನುಷ್ಠಾನ ಮಾಡುವುದು ಸಾಧ್ಯ ಹಾಗಾಗಿ ಇದರ ಅನುಷ್ಠಾನಕ್ಕಾಗಿ ಹಾಗೂ ನಾಗರೀಕರಿಗೆ

ಅನುಕೂಲವಾಗುವಂತೆ ಮಾಹಿತಿ ಆಯೋಗ ಮತ್ತು ಸಾರ್ವಜನಿಕ ದಾಖಲೆಗಳ ಅಧಿನಿಯಮದ ಅನುಷ್ಠಾನವು ತಮ್ಮೆಲ್ಲರ ಸಹಕಾರದೊಂದಿಗೆ ಮಾತ್ರ ಸಾಧ್ಯವೆಂದು ತಿಳಿಸಿದರು.

ಶ್ರೀ ಎಸ್.ಕೆ. ಕಾಂತಾ, ಮಾಜಿ ಸಚಿವರು, ಗುಲ್ಬರ್ಗಾ ಹಾಗೂ ಸಾಮಾಜಿಕ ಕಾರ್ಯಕರ್ತರು ರವರು ವಿಚಾರಗೋಷ್ಠಿಯನ್ನುದ್ದೇಶಿಸಿ ಮಾತನಾಡಿ ಈ ಸಂದರ್ಭದಲ್ಲಿ ಶ್ರೀ ಎಸ್. ನಿಜಲಿಂಗಪ್ಪ ರವರು ಒಂದು ಲೇಖನವನ್ನು ನೆನೆದು ಅದರಲ್ಲಿ "ದೇವರು ನಮ್ಮನ್ನು ಸೃಷ್ಟಿ ಮಾಡಿಲ್ಲ ಆದರೆ, ದೇವರನ್ನು ನಾವೇ ಸೃಷ್ಟಿ ಮಾಡಿರುವುದಾಗಿ ಹೇಳಿರುವಂತಹ ಮಾತನ್ನು ಹೇಳಿ. ಭಾರತದಲ್ಲಿ ವ್ಯಕ್ತಿ ಶ್ರೇಷ್ಠತೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ನಾವು ದೊಡ್ಡವರು, ನಾವು ಮೇಲಿಂದ ಬಂದವರು, ಎಂದು ಹೇಳಿ ವ್ಯಕ್ತಿತ್ವಮಹತ್ವವೆಂದು ಈ ವಿಚಾರಗೋಷ್ಠಿಯಲ್ಲಿ ತಿಳಿಸಿದರು. 19(3)ರಡಿಯಲ್ಲಿ ಅರ್ಜಿ ಸಲ್ಲಿಸಿದ್ದರೆ ಸಾರ್ವಜನಿಕರಿಗೆ ಪ್ರಕರಣ ಸಂಖ್ಯೆ ನೀಡಲು ತಡವಾಗುತ್ತಿರುವ ಕುರಿತು ಆಯೋಗವು ಕ್ರಮ ತೆಗೆದುಕೊಳ್ಳುವಂತೆ ಗೌರವಾನ್ವಿತರು ಕೋರಿದ್ದರು

ನಮ್ಮ ಭಾರತ ದೇಶದ ಶ್ರೇಷ್ಟತೆಯು ಬಹಳ ದೊಡ್ಡ ಪ್ರಮಾಣದಲ್ಲಿ ಇದ್ದು. ನಾವು ಎಷ್ಟು ಓದಿದ್ದರು ಹೆಚ್ಚು ಕೆಟ್ಟತನವನ್ನು ಸಮಾಜದಲ್ಲಿ ಮೂಡುತ್ತಿದೆ. ಈ ವಿಚಾರವಾಗಿ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ರವರ ವಿಚಾರವನ್ನು ನೆನಪಿಸುತ್ತಾ "ಅವರು ತಮ್ಮ ಕೊನೆ ದಿನಗಳಲ್ಲಿ ಬಹಳಷ್ಟು ಕೊರಗುತ್ತಾ ಅಸ್ಪೃಶ್ಯತೆ ಮತ್ತು ಜಾತ್ಯಾತೀತ ಸಲುವಾಗಿ 30 ವರ್ಷ ಚಳುವಳಿ ಮಾಡಿದ್ದುರು, ಅದರ ಲಾಭವನ್ನು ತಮ್ಮ ಕೋಟ್ಯಾಂತರ ಜನರು ಪಡೆಯುತ್ತಿಲ್ಲವೆಂದು ಹೇಳಿದರು.

ಭ್ರಷ್ಟಾಚಾರವು ಸರ್ಕಾರದ ಹಾಗೂ ಸಮಾಜದ ಮೇಲೆ ಪ್ರಭಾವಬೀರುತ್ತದೆ. ಕಾನೂನು ದೊಡ್ಡದಾ? ಅಥವಾ ಜನ ದೊಡ್ಡದಾ? ಎಂದು ನೋಡಿದರೆ ಕಾನೂನೇ ದೊಡ್ಡದಾಗಿ ಕಾಣುತ್ತದೆ. ಎಂದು ತಿಳಿಸಿ. ನಮ್ಮ ಸಲುವಾಗಿ ಕಾನೂನಿರುವುದಾಗಿ ಈಗಿನ ಕಾನೂನಿನ ವ್ಯವಸ್ಥೆಯಲ್ಲಿ ಅದು ಇಲ್ಲದಂತಾಗಿರುವುದು ಬಹಳ ನೋವಿನ ಸಂಗತಿಯಾಗಿದೆ. ಇದಕ್ಕೆ ಪೂರಕವಾಗಿ ಆರ್.ಟಿ.ಐ ನ್ನು ಕೆಲವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ನಾನು ಮಂತ್ರಿಯಾಗಿದ್ದಾಗ ತಾವು ಕೆಲವು ಕಾನೂನು ಮಾಡಿದ್ದಾಗಿ ತಿಳಿಸಿರುತ್ತಾರೆ. ತಾವು ಯಾವುದಾದರೂ ಅರ್ಜಿಯಲ್ಲಿ ಮಾಹಿತಿಯನ್ನು ಕೇಳಿದರೆ ಅದನ್ನು 8(1)(ಜೆ) ರಡಿ ನೀಡಲು ಬರುವುದಿಲ್ಲವೆಂದು ಹಿಂಬರಹ ನೀಡಿ ಸುಮ್ಮನಾಗುತ್ತಾರೆ. ಇದರಿಂದ ಮಾಹಿತಿ ಹಕ್ಕು ಕಾಯಿದೆಯ ಬೆಲೆ ಇಲ್ಲದಂತೆ ಆಗುತ್ತದೆ. ನಾಗರೀಕರಿಗೆ ಮಾಹಿತಿ ದೊರಕುವಂತೆ ಮಾಡುವುದು ಒಂದು ಕಾರ್ಯವಾಗಬೇಕೆಂದು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡು ಕೃತಜ್ಞತೆಯನ್ನು ಸಲ್ಲಿಸಿದರು.

ವಿಚಾರಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಎಲ್ಲಾ ಗಣ್ಯರಿಗೆ ಶ್ರೀ ಟಿ.ರಾಮುರವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮ ಕೊನೆಯ ಹಂತದಲ್ಲಿ ಉಪಸ್ಥಿತರಿದ್ದಂತಹ ಕೆಲವು ಸಾರ್ವಜನಿಕರೊಂದಿಗೆ ಸಾಮೂಹಿಕವಾಗಿ ಸಂವಾದ ಏರ್ಪಡಿಸಲಾಗಿತ್ತು ಅದರಲ್ಲಿನ ಕೆಲವು ಅಂಶಗಳ

- ಮಾಹಿತಿ ಹಕ್ಕು ಅಧಿನಿಯಮದ 4(1)(ಎ) 4(1) (ಬಿ) ಯನ್ನು ಎಲ್ಲಾ ಇಲಾಖೆಗಳಲ್ಲಿ ಅಳವಡಿಸುವಂತೆ ಕೋರಿದರು.
- ಆಸ್ತಿ ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಕೊಡಿಸುವ ವಿಚಾರ.
- ಮಾಹಿತಿ ಹಕ್ಕು ಅಧಿನಿಯಮದ 8(1)(ಜೆ) ವಿನಾಯಿತಿ ಕುರಿತು.
- ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ ಮಾಹಿತಿ ಹಕ್ಕು ಕಾಯಿದೆ ಬಗ್ಗೆ ಡಿಜಿಟಲೈಸ್ಡ್ ಮಾಡುವ ಕುರಿತು.
- ಮೇಲ್ಮನವಿದಾರರು ಕೋರಿರುವ ಮಾಹಿತಿಗೆ ಸಂಬಂಧಿಸಿದಂತೆ ವಿಚಾರಣೆಯ ಸಮಯದಲ್ಲಿ ಕೇವಲ ಅಂಚೆ ಸ್ವೀಕೃತಿಯನ್ನು ಪರಿಶೀಲಿಸಿ ಮಾಹಿತಿಯು ಪಡೆದಿರುತ್ತಾರೆಂದು ಭಾವಿಸಿ ಪ್ರಕರಣವನ್ನು ಮುಕ್ತಾಯಗೊಳಿಸುವ ಕುರಿತು.
- ಮೇಲ್ಮನವಿದಾರರು ಮಾಹಿತಿ ಕೋರಿದ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಪ್ರಥಮ ಮೇಲ್ಮನವಿ ಪ್ರಾಧಿಕಾರಿ ರವರ ಹೆಸರು ಮತ್ತು ಪದನಾಮ ಕಡ್ಡಾಯವಾಗಿ ನಮೂದಿಸುವ ಕುರಿತು.
- ಮೇಲ್ಮನವಿದಾರರು 6(1) ರೀತ್ಯಾ ಅರ್ಜಿಯಲ್ಲಿ ಕೋರಿದ ಮಾಹಿತಿ ಸಂಬಂಧಿಸಿದ ಅಧಿಕಾರಿಯು ಮಾಹಿತಿಯನ್ನು ನೀಡದೆ ವಿನಾಕಾರಣ ಸಂಬಂಧಪಡದೆ ಇರುವ ಅಧಿಕಾರಿಗೆ ಮಾಹಿತಿ ಹಕ್ಕು ಅಧಿನಿಯಮದ 6(3) ಅಡಿಯಲ್ಲಿ ವರ್ಗಾಯಿಸುವ ಕುರಿತು
- ಮೇಲ್ಮನವಿದಾರರು ಮಾಹಿತಿ ಕೋರಿದ ಸಂದರ್ಭದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ಕೇವಲ ಹಿಂಬರಹ ಮೂಲಕ ಮಾಹಿತಿಯನ್ನು ಒದಗಿಸುವ ಜೊತೆಯಲ್ಲಿ ಪ್ರಥಮ ಮೇಲ್ಮನವಿಯ ವಿವರಗಳನ್ನು ನೀಡುವ ಕುರಿತು.
- ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಜಂಟಿ ಅರ್ಜಿಯನ್ನು 18(1) 19(3) ಸಲ್ಲಿಸುವ ಕುರಿತು.

ಮಾಹಿತಿ ಹಕ್ಕಿನ ಅನುಷ್ಠಾನದ ವಿಷಯದ ವಿಚಾರದಲ್ಲಿ ಅರ್ಥಪೂರ್ಣ ಸಂವಾದ ನಡೆದು ನಂತರ ಮುಕ್ತಾಯಗೊಳಿಸಲಾಯಿತು.

ಸಹಿ/-

(ಎಲ್.ಕೃಷ್ಣಮೂರ್ತಿ)

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು,

ಕರ್ನಾಟಕ ಮಾಹಿತಿ ಆಯೋಗ.

ಬೆಂಗಳೂರು.

,

Debate Photos at Mahiti Soudha Bangaluru.







ಮಾಹಿತಿಹಕ್ಕು ಅಧ್ಯಯನ ಕೇಂದ್ರ
ಸಹಯೋಗ
ಕರ್ನಾಟಕ ಮಾಹಿತಿ ಆಯೋಗ
ಮಾಹಿತಿ ಸೌಧ – ಬೆಂಗಳೂರು


ಮಾಹಿತಿಹಕ್ಕು ಅಧ್ಯಯನ ಕೇಂದ್ರ
ಕರ್ನಾಟಕ ಮಾಹಿತಿ ಆಯೋಗ
ಮಾಹಿತಿ ಸೌಧ – ಬೆಂಗಳೂರು




Vedio Uploaded Link at Youtube.

https://www.youtube.com/watch?v=wrsrlEpKgcU